**ಸಿ.ಸಿ. ಸಂ. 1956 /2021 PW.1**

**ದಿನಾಂಕಃ 10.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲು ಆರೋಪಿ ಪರ ಶ್ರೀ. ಹೆಚ್.ಕೆ. ವಕೀಲರಿಂದಃ-

1) ನಾನು ಟೆಲಿಕಾಂ ವ್ಯವಹಾರವನ್ನು 2017 – 2018 ರಿಂದ ಮಾಡುತ್ತಿದ್ದೇನೆ ಹಾಗೂ ನಗರಸಭಾ ಸದಸ್ಯನಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನಾನು ಆದಾಯ ತೆರಿಗೆ ಪಾವತಿದಾರ. ಇದನ್ನು ಹೊರತಪಡಿಸಿ ನನಗೆ ಬೇರೆ ಯಾವುದೇ ಆದಾಯ ಇಲ್ಲ. ಆರೋಪಿಯಗೆ ನಾನು 2020 ರಲ್ಲಿ 1 ಲಕ್ಷ ಹಣ ಸಾಲವಾಗಿ ನೀಡಿದ್ದೇನೆ. ಈ ಬಗ್ಗೆ ಆದಾಯ ತೆರಿಗೆಯಲ್ಲಿ ನಮೂದಿಸಿದ್ದೀರಾ ಎಂದರೆ ಇಲ್ಲ ಸಾಕ್ಷಿ ಮುಂದುವರೆದು ಸದರಿ ಹಣವನ್ನು ನನ್ನ ವೈಯಕ್ತಿಕ ಉಳಿತಾಯ ಹಣದಿಂದ ನೀಡಿದ್ದೇನೆ. ಆರೋಪಿ ನನಗೆ ಪರಿಚಯಸ್ಥರು. ಆರೋಪಿ ಮತ್ತಿಕೆರೆಯ ಖಾನ್ ರೆಸ್ಟೋರೆಂಟ್ ನಲ್ಲಿ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಎಷ್ಟು ಸಂಬಳ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿ ನನ್ನನ್ನು ಸಾಲ ಕೇಳಿದ ಸಂದರ್ಭದಲ್ಲಿ ಭೀಮೇಶ್ ಹಾಗೂ ಸಫ್ರುದ್ದೀನ್ ರವರು ಹಾಜರಿದ್ದರು. ಆರೋಪಿ ನನ್ನನ್ನು ಸುಮಾರು 15 ದಿನಗಳಿಂದಲೂ ಹೋಟಲ್ ವ್ಯವಹಾರಕ್ಕಾಗಿ ಸಾಲವಾಗಿ ಹಣವನ್ನು ಕೇಳುತ್ತಿದ್ದರು. ನಾನು ಆರೋಪಿಗೆ ಸಾಲದ ಹಣವನ್ನು ಅವರ ರೆಸ್ಟೋರೆಂಟ್ ನಲ್ಲಿಯೇ ನೀಡಿದ್ದೇನೆ. ನಾನು ಯಾವುದೇ ಬಡ್ಡಿ ಹಣದ ವ್ಯವಹಾರ ಮಾಡುವುದಿಲ್ಲ.
ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ